## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\461\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 20/11/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ ಬೆಸ್ಕಾಂನ 1) ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ನವೀದ್ ಪಾಷ ಮತ್ತು 2)ವಾಣಿಜ್ಯ ಕಾರ್ಯ ಮತ್ತು ಪಾಲನಾ ವಿಭಾಗದ ಪ್ರಭಾರ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಕೆ.ಆರ್.ಸತೀಶ್ ರವರ ಕರ್ತವ್ಯ ಲೋಪದ ಬಗ್ಗೆ.

**********

ಕೋಲಾರ ಜಿಲ್ಲೆ ಅರಳೇಪೇಟೆ ಶ್ರೀ ಹನುಮಾನ್ ನಿಲಯ #108ರ ನಿವಾಸಿಯಾದ ಶ್ರೀ.ಎಸ್.ಆರ್.ಆನಂದ ಬಿನ್ ಲೇಟ್.ಎಸ್.ಎನ್.ರಾಮಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ನವೀದ್ ಪಾಷ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ನಗರದ ಅರಳೆಪೇಟೆ ಕಿರಿದಾದ ರಸ್ತೆಯಲ್ಲಿ ಬೆಸ್ಕಾಂ ಸಂಸ್ಥೆಯು ಮೋರಿಯೊಂದರ ಮೇಲೆ ಎರಡು ಬೃಹತ್ ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಿದ್ದರಿಂದ, ರಸ್ತೆಯಲ್ಲಿನ ಸಂಚಾರಕ್ಕೆ ಅಡ್ಡಿ ಉಂಟಾಗಿದ್ದಲ್ಲದೇ, ಸದರಿ ಪರಿವರ್ತಕಗಳಿಗೆ ಹೊಂದಿಕೊಂಡಂತೆ ಸುವರ್ಣ ಶಾಲೆ ಇರುವುದರಿಂದ ಮಕ್ಕಳು ಸದಾಕಾಲ ಪರಿವರ್ತಕಗಳ ಬಳಿ ಸುಳಿದಾಡುತ್ತಿದ್ದಾರೆ. ಸುರಕ್ಷತೆಯ ಯಾವುದೇ ಮಾನದಂಡವನ್ನು ಪರಿಗಣನೆಗೆ ತೆಗೆದುಕೊಳ್ಳದೇ, ಬೆಸ್ಕಾಂ ಸಂಸ್ಥೆಯು ಪರಿವರ್ತಕವನ್ನು ಸ್ಥಾಪಿಸಿದ್ದರಿಂದ, ಇಂಧನ ಸಚಿವರಿಗೆ ನೀಡಿದ ದೂರಿನಲ್ಲಿ ಸದರಿ ಪರಿವರ್ತಕಗಳನ್ನು ಸ್ಥಳಾಂತರಿಸಲು ಬೆಸ್ಕಾಂ ಸಂಸ್ಥೆಗೆ ಸೂಚಿಸಿದ್ದಾರೆ. ಈ ಬಗ್ಗೆ ನಗರಸಭೆಯ ಹಿಂದಿನ ಆಯುಕ್ತರು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿ ಪರಿವರ್ತಕಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಆದೇಶ ನೀಡಿದ್ದಾರೆ. ಆದರೆ, ಈವರೆವಿಗೂ ಪರಿವರ್ತಕಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿಲ್ಲವೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸಾರ್ವಜನಿಕರ ದೂರಿನ ಮೇರೆಗೆ ಸಂಬಂಧಿಸಿದ ಪರಿವರ್ತಕಗಳನ್ನು ಸ್ಥಳಾಂತರಿಸಲು ತಮ್ಮ ಕಛೇರಿಯಿಂದ ದಿನಾಂಕ:05/06/14ರ ಅಂದಾಜು ಪಟ್ಟಿಯನ್ನು ತಯಾರಿಸಿ, ದಿ:04/08/14ರಂದು ಕಾರ್ಯಾದೇಶವನ್ನು ಪಡೆಯಲಾಗಿದೆ. ಕೋಲಾರ ನಗರಸಭೆಯ ಆಯುಕ್ತರು ಸದರಿ ಪರಿವರ್ತಕಗಳನ್ನು ಬಿಂದುಮಾಳ್ಯಂ ಕಲ್ಯಾಣ ಮಂಟಪದ ಮುಂಭಾಗ ಅಳವಡಿಸಲು ಅನುಮತಿ ನೀಡಿದ್ದು, ಅದರಂತೆ ಜನವರಿ, 2015ರ ಮೊದಲ ವಾರದಲ್ಲಿ ಸ್ಥಳ ಪರಿಶೀಲನೆ ಮಾಡಿ, ಕಾಮಗಾರಿಯನ್ನು ಆರಂಭಿಸುತ್ತಿದ್ದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕೋಲಾರ ಜಿಲ್ಲಾ ಕಛೇರಿಯು ತಮ್ಮ ಪತ್ರ ದಿ:05/01/15ರಲ್ಲಿ ಸದರಿ ಸ್ಥಳವು ವಕ್ಫ್ ಮಂಡಳಿಗೆ ಸೇರಿದ್ದು, ಸದರಿ ಜಾಗದಲ್ಲಿ ಯಾವುದೇ ಕಾಮಗಾರಿಯನ್ನು ಮಾಡಬಾರದೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ದಿ:15/01/15ರಂದು ತಾವು ನಗರಸಭೆಯ ಪೌರಾಯುಕ್ತರಿಗೆ ಪತ್ರ ಬರೆದು, ಪರಿವರ್ತಕಗಳನ್ನು ಸ್ಥಳಾಂತರಿಸಲು ಸೂಕ್ತ ಜಾಗ ಸೂಚಿಸುವಂತೆ ಮನವಿ ಮಾಡಿಕೊಂಡಿದ್ದು, ತಕ್ಷಣವೇ ಕಾಮಗಾರಿಯನ್ನು ಬೆಸ್ಕಾಂ ವತಿಯಿಂದ ಮಾಡಿಕೊಡಲಾಗುವುದೆಂದು ಹೇಳಿದ್ದಾರೆ.

4. ದೂರಿಗೆ ಸಂಬಂಧಿಸಿದಂತೆ, ಕೋಲಾರ ನಗರಸಭೆ ಆಯುಕ್ತರಿಂದ ವರದಿಯನ್ನು ಕೇಳಲಾಗಿ, ಸದರಿಯವರು ತಮ್ಮ ಪತ್ರದಲ್ಲಿ, ಪರಿವರ್ತಕಗಳನ್ನು ಸ್ಥಳಾಂತರ ಮಾಡುವ ಬಗ್ಗೆ ಕೋಲಾರ ನಗರಸಭೆಗೆ ಕೋರಿದರೆ, ಜಂಟಿ ಪರಿವೀಕ್ಷಣೆ ಕೈಗೊಂಡು ಸೂಕ್ತ ಸ್ಥಳ ಆಯ್ಕೆ ಮಾಡಿ, ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

5. ದೂರಿನ ಬಗ್ಗೆ ಮುಂದುವರೆದ ವರದಿಯನ್ನು ಕೋಲಾರ ಬೆಸ್ಕಾಂ ಕಾರ್ಯಪಾಲಕ ಅಭಿಯಂತರರನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ, ಪರಿವರ್ತಕಗಳನ್ನು ಬದಲಿಸಲು ಸ್ಥಳಾವಕಾಶ ಇಲ್ಲದ ಕಾರಣ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ರೀತಿಯಲ್ಲಿ ಈ ಹಿಂದೆ ಡಬಲ್ ಪೋಲ್ ಇದ್ದ ಪರಿವರ್ತಕಗಳನ್ನು ಸಿಂಗಲ್ ಸ್ಟನ್ ಪೋಲ್ ಮೇಲೆ ನಿರ್ಮಿಸಲು ಬೆಸ್ಕಾಂ, ಕೋಲಾರ ವಿಭಾಗ ಕಛೇರಿಯಿಂದ ಕಾರ್ಯಾದೇಶ ಪಡೆದು, ಸಿಂಗಲ್ ಸ್ಟನ್ ಪೋಲ್ ಮೇಲೆ ಪರಿವರ್ತಕಗಳನ್ನು ನಿರ್ಮಿಸಿ, ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೆಂದು ಹೇಳಿದ್ದಾರೆ.

6. ದೂರಿಗೆ ಸಂಬಂಧಿಸಿದಂತೆ ಅಳವಡಿಸಲಾದ ಪರಿವರ್ತಕಗಳು ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆ, 2015 ಮತ್ತು Central Electricity Authority (Technical Standards for Construction of Electrical

BD/461/15



Plants and Electric Lines) Regulations, 2010ರ ನಿಯಮಾವಳಿಗಳ ಅನ್ವಯ ಇಲ್ಲದಿರುವುದರಿಂದ, ಸದರಿ ಕರ್ತವ್ಯ ಲೋಪಕ್ಕೆ ಜವಾಬ್ದಾರರಾದ ಕೋಲಾರ ಬೆಸ್ಕಾಂ, ವಾಣಿಜ್ಯ, ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯಪಾಲಕ ಅಭಿಯಂತರರು (ವಿ) ಶ್ರೀ.ಕೆ.ಆರ್.ಸತೀಶ್ ರವರನ್ನು 2ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಅವರ ವರದಿಯನ್ನು ಪರಿಗಣಿಸಿದೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕೋಲಾರ ನಗರದ ಅರಳೆಪೇಟೆ ಕಿರಿದಾದ ರಸ್ತೆಯಲ್ಲಿ ಬೆಸ್ಕಾಂ ಸಂಸ್ಥೆಯು ಮೋರಿಯ ಬಳಿ ಎರಡು ಬೃಹತ್ ವಿದ್ಯುತ್ ಪರಿವರ್ತಕಗಳನ್ನು ಸ್ಥಾಪಿಸಿದ್ದರಿಂದ, ರಸ್ತೆಯಲ್ಲಿನ ಸಂಚಾರಕ್ಕೆ ಅಡ್ಡಿ ಉಂಟಾಗಿದೆ ಹಾಗೂ ಸದರಿ ಪರಿವರ್ತಕಗಳಿಗೆ ಹೊಂದಿಕೊಂಡಂತೆ ಸುವರ್ಣ ಶಾಲೆ ಇದೆ ಹಾಗೂ ಸದರಿ ಪರಿವರ್ತಕಗಳು ಜನ ನಿಬಿಡ ಮತ್ತು ವಸತಿ ಪ್ರದೇಶದಲ್ಲಿರುವುದರಿಂದ, ಸಾವು-ನೋವು ಸಂಭವಿಸುವ ಅವಕಾಶವಿದೆಯೆಂದು ದೂರಿನ ಆಪಾದನೆಯಾಗಿದ್ದು, ಸದರಿ ಪರಿವರ್ತಕಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಬೇಕೆಂದು ದೂರುದಾರರು ಕೇಳಿಕೊಂಡಿದ್ದಾರೆ. ಪರಿವರ್ತಕಗಳನ್ನು ಸ್ಥಳಾಂತರಿಸಲು ಸೂಕ್ತ ಜಾಗವನ್ನು ಸೂಚಿಸುವಂತೆ 1ನೇ ಎದುರುದಾರರು ನಗರಸಭೆಯ ಪೌರಾಯುಕ್ತರಿಗೆ ಮನವಿ ಮಾಡಿದ್ದಾರೆ. ಪರಿವರ್ತಕಗಳನ್ನು ಸ್ಥಳಾಂತರಿಸಲು ಸೂಕ್ತ ಜಾಗವನ್ನು ನಗರಸಭೆ ವತಿಯಿಂದ ಸೂಚಿಸಿದ ತಕ್ಷಣವೇ ಸದರಿ ಕಾಮಗಾರಿಯನ್ನು ಬೆಸ್ಕಾಂ ವತಿಯಿಂದ ಮಾಡಿಕೊಡುವುದಾಗಿ 1ನೇ ಎದುರುದಾರರು ಹೇಳಿದ್ದು, ಪರಿವರ್ತಕಗಳನ್ನು ಸ್ಥಳಾಂತರಿಸಲು ಸ್ಥಳಾವಕಾಶ ಇಲ್ಲದ ಕಾರಣ, ಸಾರ್ವಜನಿಕರ ಹಿತದೃಷ್ಟಿಯಿಂದ ಡಬಲ್ ಪೋಲ್ ಮೇಲಿದ್ದ ಪರಿವರ್ತಕಗಳನ್ನು ಸಿಂಗಲ್ ಸ್ಪನ್ ಪೋಲ್ ಮೇಲೆ ಪರಿವರ್ತಕಗಳನ್ನು ನಿರ್ಮಿಸಿರುವುದು ಕಂಡು ಬಂದಿದೆ;

2) ಪರಿವರ್ತಕಗಳನ್ನು ಅಳವಡಿಸಿದ ಜಾಗದ ಆಸುಪಾಸಿನಲ್ಲಿ ಮನೆ \ ಕಟ್ಟಡಗಳಿರುವುದು ಕಂಡು ಬಂದಿದ್ದು, ಸದರಿ ಪರಿವರ್ತಕಗಳ ಸುತ್ತಲೂ ಬೇಲಿ, ಗೇಟ್ ಮತ್ತು ಎಚ್ಚರಿಕೆ ಫಲಕವನ್ನು ಅಳವಡಿಸದೇ ಇರುವುದು ಭಾವಚಿತ್ರಗಳಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಪರಿವರ್ತಕಗಳ ಸುತ್ತಲೂ ತಡೆ ಬೇಲಿ, ಗೇಟ್ ಮತ್ತು ಎಚ್ಚರಿಕೆ ಫಲಕವನ್ನು ಅಳವಡಿಸುವುದನ್ನು ಕರ್ನಾಟಕ ವಿದ್ಯುತ್ ವಿತರಣಾ ಸಂಹಿತೆ, 2015 ಮತ್ತು Central Electricity Authority (Technical Standards for Construction of Electrical Plants and Electric Lines) Regulations, 2010 ರಡಿ ಕಡ್ಡಾಯಗೊಳಿಸಿದೆ. ಸದರಿ ದೂರಿಗೆ ಸಂಬಂಧಿಸಿದಂತೆ ಅಳವಡಿಸಲಾದ ಪರಿವರ್ತಕಗಳು ಈಗ ಮೇಲೆ ಹೇಳಿದ ನಿಯಮಾವಳಿಗಳ ಅನ್ವಯ ಇಲ್ಲದಿರುವುದು ಕಂಡು ಬಂದಿದೆ. ಕಾರಣ, 1 ಮತ್ತು 2ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆ ಮತ್ತು ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ಮತ್ತು 2ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ, 1 ಮತ್ತು 2ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1988ರ ನಿಯಮಗಳ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1988ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 22/11

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.

20/11